

## ಹಾಲುಮನದ 'ಹಾಲಕ್ಕಿ'

ಚಿತ್ರದಲ್ಲಿರುವುದು ಗ್ರಾಮೀಣಿಗರ ನಿಘಂಟಿನಲ್ಲಿ ಹಾಲಕ್ಕಿ ಅಥವಾ ಶಕುನದ ಹಕ್ಕಿ ಎಂದೇ ಕರೆಯಲ್ಪಡುವ ಪುಟ್ಟ ಗೂಬೆ (Spotted owlet). ಇದೊಂದು ನಿಶಾಚರ ಹಕ್ಕಿ. ಹೊಲದಲ್ಲಿ ಮನುಷ್ಯನ ಕಲ್ಲೇಟಿಗೆ ಗಾಯಗೊಂಡು, ನಮ್ಮ ಮನೆಯಲ್ಲಿ ಆರೈಕೆಯಾಗಿ ಸದ್ಯ ಆಗಸಕ್ಕೆ ಹಾರಿದೆ. ಹೊಲಗದ್ದೆಗಳಲ್ಲಿ ದಂಶಕಜೀವಿಗಳಾದ ಇಲಿ, ಹೆಗ್ಗಣಗಳನ್ನು ಪ್ರಧಾನವಾಗಿ ಬೇಟೆಯಾಡಿ ರೈತರ ಬೆಳೆಗಳಿಗೆ ಬೆಂಬಲವಾಗಿ ಕತ್ತಲ ಕಾರ್ಯಾಚರಣೆ ಮಾಡುವ, ಎಲೆಮರೆಯ ಕಾಯಿಯಂತಿರುವ ಈ ಹಕ್ಕಿಗಳು ನವೆಂಬರ್–ಮಾರ್ಚ್‌ವರೆಗೆ ಕಟ್ಟಡಗಳ ಬಿರುಕು ಅಥವಾ ಮರದ ಪೊಟರೆಗಳಲ್ಲಿ ಗೂಡು ಕಟ್ಟುತ್ತವೆ. ಅವುಗಳ ತಂಟೆಗೆ ಹೋಗದ ಹೊರತು ನಿರುಪದ್ರವಿಗಳು. ಇದರ ಬಲಿಷ್ಠ ಕಾಲುಗಳು, ಮೊನಚಾದ ಉಗುರುಗಳು, ಚರ್ಮ ಹಿಸಿಯುವಂತಹ ಕೊಕ್ಕು ಬೇಟೆಗೆ ಹೇಳಿಮಾಡಿಸಿದ ಆಯುಧಗಳು. ಇವುಗಳ ಇನ್ನೊಂದು ವಿಶೇಷವೆಂದರೆ ಇವು ಬಲಿಪ್ರಾಣಿಗೆ ಎಷ್ಟೇ ಹತ್ತಿರದಲ್ಲಿ ಹಾರಿಬಂದರೂ ಇವುಗಳ ರೆಕ್ಕೆಗಳಿಂದ ಕಿಂಚಿತ್ತೂ ಶಬ್ದ ಹೊರಡುವುದಿಲ್ಲ. ಹೀಗಾಗಿ ನಿಶ್ಶಬ್ದವಾಗಿ ಬೇಟೆಯ ಮೇಲೆರಗಲು ಇವು ಸಮರ್ಥವಾಗಿವೆ. ಆದರೆ ಇಲ್ಲಸಲ್ಲದ ಮೂಢನಂಬಿಕೆಗೆ ಇವು ಬಲಿಯಾಗುತ್ತಿರುವುದು ಮಾತ್ರ ದುರಂತವೇ ಆಗಿದೆ. ಒಂದೆಡೆ ಇದನ್ನು ಲಕ್ಷ್ಮಿಯ ವಾಹನವೆಂದು ನಂಬಿದರೆ, ಇನ್ನೊಂದೆಡೆ ಇದರ ಕೂಗು ಕೇಳುವುದು ಅಪಶಕುನ ಎಂಬ ನಂಬಿಕೆಯೂ ಇದೆ. ಈ ಎರಡೂ ಮೌಢ್ಯಗಳಾಚೆಗೆ ಇದೊಂದು ಜೀವಿ ಮತ್ತು ನಮ್ಮಂತೆ ಜೀವಿಸಲು ಅದಕ್ಕೂ ಹಕ್ಕಿದೆ ಎಂಬುದನ್ನು ಮನುಕುಲ ಎಂದೋ ಮರೆತಂತಿದೆ.

–ಮಹೇಶ್ವರ ಹುರುಕಡ್ಲಿ, ಬಾಚಿಗೊಂಡನಹಳ್ಳಿ

## ಬಾಟಲಿ ಹೊತ್ತ ಕೊಡೆ!

ಒಂದು ಮುಂಜಾನೆ ಉದ್ಯೋಗಾರ್ಥವಾಗಿ ಹೊರಟು ಬಸ್ಸು ನಿಲ್ದಾಣದಲ್ಲಿ ನಿಂತಿದ್ದ ನನ್ನ ಗಮನವನ್ನು ಈ ಕೊಡೆಯ ಮೇಲ್ತುದಿ ಸೆಳೆಯಿತು. ಸರ್ವೇ ಸಾಮಾನ್ಯವಾಗಿ ಛತ್ರಿಯ ಮೇಲ್ತುದಿ ಚೂಪಾಗಿರುತ್ತದೆ. ಆದರೆ ಅಲ್ಲಿದ್ದ ವ್ಯಕ್ತಿಯೊಬ್ಬರ ಕೊಡೆಯ ತುದಿಯಲ್ಲಿ ಪ್ಲಾಸ್ಟಿಕ್ ಬಾಟಲಿ ಇತ್ತು.

ಕುತೂಹಲದಿಂದ ಅವರನ್ನು ಹೀಗೇಕೆಂದು ವಿಚಾರಿಸಿದೆ. ಅದಕ್ಕವರು, 'ಒಮ್ಮೆ ಬಸ್ಸಿನಲ್ಲಿ ಪ್ರಯಾಣಿಸುತ್ತಿದ್ದಾಗ ಎದುರಿರುವ ಪ್ರಯಾಣಿಕರೊಬ್ಬರ ಛತ್ರಿಯ ಚೂಪಾದ ಕೊನೆಯು ನನ್ನ ಎಡಗಣ್ಣನ್ನು ಚುಚ್ಚುವುದರಿಂದ ಅಲ್ಪಮಾತ್ರದಲ್ಲೇ ತಪ್ಪಿಸಿಕೊಂಡಿದ್ದೆ. ಅಂದಿನಿಂದ ತುಂಬಾ ಜಾಗರೂಕನಾಗಿದ್ದೇನೆ. ಅಂತೆಯೇ ನನ್ನ ಕೊಡೆಯ ಕೊನೆಯೂ ಇತರರನ್ನು ಚುಚ್ಚದಿರಲೆಂದು ಮುಂಜಾಗ್ರತೆಗಾಗಿ ಈ ಬಾಟಲಿಯನ್ನು ಛತ್ರಿಗೆ ಅಳವಡಿಸಿದ್ದೇನೆ. ಇದು ಹೊಸ ವಿನ್ಯಾಸವೂ ಆಯಿತು' ಎಂದರು.

–ರಮಣ್ ಶೆಟ್ಟಿ ರೆಂಜಾಳ್, ಮುಂಬೈ






## ಕರಾವಳಿಯಲ್ಲಿ ಸೈಬೀರಿಯನ್ ಹಸ್ಕಿ

ಚಿತ್ರದಲ್ಲಿ ಕಾಣುತ್ತಿರುವುದು ಹಸ್ಕಿ ನಾಯಿ. ಇದು ಸಾಮಾನ್ಯವಾಗಿ ನಮ್ಮ ನಡುವೆ ಕಾಣುವ ಹಸ್ಕಿಯಲ್ಲ. ಡಬಲ್‌ಕೋಟ್‌ನ ನಾಯಿತಳಿಯಾಗಿದ್ದು, ಈಶಾನ್ಯ ಸೈಬೀರಿಯಾದ ಹಿಮಪರ್ವತಗಳಲ್ಲಿ ಕಂಡು ಬರುತ್ತದೆ. ಇದರ ದೇಹ ರಚನೆಯು ಹಿಮಪರ್ವತಗಳ ವಾತಾವರಣಕ್ಕನುಗುಣವಾಗಿದೆ. ತುಸು ಹೆಚ್ಚು ಸೆಕೆಯುಳ್ಳ ರಾಜ್ಯದ ಕರಾವಳಿ ವಾತಾವರಣಕ್ಕೂ ಹೊಂದಿಕೊಂಡು ಬದುಕುತ್ತಿರುವುದು ಶ್ವಾನಪ್ರಿಯರಲ್ಲಿ ಅಚ್ಚರಿ ಮೂಡಿಸಿದೆ. ಕಳೆದ ಎರಡೂವರೆ ವರ್ಷದಿಂದ ಹೊನ್ನಾವರದ ಮಹೇಶ ಪಾಲೇಕರರ ಮನೆಯಲ್ಲಿ ಸಹಜ ನಾಯಿಯಂತೆ ಇದೂ ಜೀವಿಸುತ್ತಿದೆ.

–ಮಯೂರ ಎಸ್. ತಾಂಡೇಲ, ಗಂಗೊಳ್ಳಿ